## ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 50/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 10-06-2024 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಮಹೇಶ ಮರಿಬಸಯ್ಯನವರ | **ಪ್ರಾ.ಸಾ ಃ 05** |
| **ತಂದೆ ಃ ಗಂಡ ಹೆಸರು** | ಃ ಚನ್ನಯ್ಯ | **ಚಾ.ಸಾ ಃ 06** |
| **ವಯಸ್ಸು** | ಃ 41 ವರ್ಷ | |
| **ಉದ್ಯೋಗ** | ಃ ಕ್ಲರ್ಕ, ಎಸ್ ಬಿ ಐ ಹುಬ್ಬಳ್ಳಿ | |
| **ವಾಸಸ್ಥಳ** | ಃ ಹುಬ್ಬಳ್ಳಿ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 11.04.2016 ರಿಂದ 13.09.2019 ರವರೆಗೆ ಕಲಘಟಯ ಸ್ಟೇಟ ಬ್ಯಾಂಕ ಆಫ್ ಮೈಸೂರ (ನಂತರ ಸ್ಟೇಟ್ ಬ್ಯಾಂಕ ಆಫ್ ಇಂಡಿಯ) ನಲ್ಲಿ ಕ್ಲಕರ್ ಎಂದು ಸೇವೆ ಸಲ್ಲಿಸಿದ್ದೇನೆ.

ನನಗೆ ಚಾಸಾ-1 ರಿಂದ 3 ಮತ್ತು 7 ರವರ ಪರಿಚಯ ಇದೆ. ನನಗೆ 1 ರಿಂದ 3 ನೇ ಆರೋಪಿಯ ಪರಿಚಯ ಇಲ್ಲ. 4 ನೇ ಆರೋಪಿಯ ಪರಿಚಯ ಇದೆ. ಸದರಿಯವರು ನಮ್ಮ ಬ್ಯಾಂಕಿನಲ್ಲಿ ಮ್ಯಾನೇಜರ ಆಗಿದ್ದರು.

1 ರಿಂದ 3 ನೇ ಆರೋಪಿ ನಮ್ಮ ಬ್ಯಾಂಕ ಶಾಖೆಯಿಂದ ಕಾರ ಲೋನ ಪಡೆದುಕೊಂಡು ಹಣ ಮರುಪಾವತಿ ಮಾಡಿರಲಿಲ್ಲ. ಆ ಸಮಯದಲ್ಲಿ 4 ನೇ ಆರೋಪಿ ಬ್ಯಾಂಕ ಮ್ಯಾನೇಜರ ಆಗಿದ್ದರು. 4 ನೇ ಆರೋಪಿ ವರ್ಗಾವಣೆ ಆದ ನಂತರ ಚಾಸಾ-1 ರವರು ಬ್ಯಾಂಕ ಮ್ಯಾನೇಜರ ಆಗಿ ಶಾಖೆಗೆ ಬಂದಿರುತ್ತಾರೆ, ಚಾಸಾ-1 ರವರು ದಾಖಲೆಗಳನ್ನು ಪರಿಶೀಲಿಸಿದಾಗ ದಾಖಲೆಗಳು ಸರಿಯಾಗಿ ಇಲ್ಲ ಎಂದು ಕಂಡುಬಂದಿರುತ್ತದೆ. ಈ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿದಾಗ ಕಾನೂನು ಕ್ರಮ ಜರುಗಿಸುವಂತೆ ಚಾಸಾ-1 ರವರಿಗೆ ಮಾಹಿತಿ ನೀಡಿರುತ್ತಾರೆ. ಆರೋಪಿತರು ಬ್ಯಾಂಕಿನಿಂದ ಎಷ್ಟು ಮೊತ್ತಕ್ಕೆ ಸಾಲ ಪಡೆದುಕೊಂಡಿದ್ದ ಗೊತ್ತಿಲ್ಲ, ಯಾವ ಖಾತೆಗೆ ವರ್ಗಾವಣೆ ಮಾಡಿದ್ದ, ಹೇಗೆ ಹಣ ಪಡೆದುಕೊಂಡಿದ್ದಾನೆ ಎನ್ನುವದು ನನಗೆ ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಿಸಿದ್ದು ಹೇಳಿಕೆ ನೀಡಿದ್ದೇನೆ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** *ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

2015 ರಲ್ಲಿ 1 ರಿಂದ 3 ನೇ ಆರೋಪಿತರು ನಮ್ಮ ಬ್ಯಾಂಕ ಶಾಖೆಗೆ ಮೇಲಿಂದ ಮೇಲೆ ಕಾರ ಲೋನ ಪಡೆದುಕೊಳ್ಳುವ ಸಲುವಾಗಿ ಬಂದು 4 ನೇ ಆರೋಪಿಯ ಕಚೇರಿಯಲ್ಲಿ ಬಹಳ ಹೊತ್ತು ಕುಳಿತುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿಯು 1 ನೇ ಆರೋಪಿ ಹಾಗೂ ಇತರರನ್ನು ಕಾರ ಲೋನ ಕೊಡಿಸುವ ಸಲುವಾಗಿ ಅವರಿಗೆ ಜಾಮೀನುದಾರನಾಗಿ ಕಾರ ಲೋನ ಹಣ ಕೊಡಿಸುತ್ತಿದ್ದಾನೆಂದು ನಮ್ಮ ಬ್ಯಾಂಕ ಸಿಬ್ಬಂದಿಯವರು ಮಾತನಾಡುತ್ತಿದ್ದುದರಿಂದ ನನಗೆ ತಿಳಿದುಬಂದಿರುತ್ತದೆ ಎಂದರೆ

ಸರಿಯಲ್ಲ. 1 ನೇ ಆರೋಪಿಯು ಕಾರ ಖರೀದಿಸುವ ಉದ್ದೇಶದಿಂದ ರೇವಣಕರ ಮೋಟರ್ಸ ಪ್ರಾ. ಲಿ ಹುಬ್ಬಳ್ಳಿ ಇವರ ಹೆಸರಿನ ಖೊಟ್ಟಿ ಕೊಟೇಷನ ದಾಖಲೆಗಳನ್ನು ಸಲ್ಲಿಸಿದ್ದು ಅದಕ್ಕೆ 2 ನೇ ಆರೋಪಿ ಜಾಮೀನುದಾರನಾಗಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಆರೋಪಿಯು 1 ಮತ್ತು 2 ನೇ ಆರೋಪಿಯೊಂದಿಗೆ ಶಾಮಿಲಾಗಿ ದಾಖಲೆಗಳನ್ನು ಪರಿಶೀಲಿಸದೆ ಒಳಸಂಚು ರೂಪಿಸಿ ದಾಖಲೆಗಳು ಖೊಟ್ಟಿಯಾಗಿರುತ್ತವೆ ಎನ್ನುವದು ಗೊತ್ತಿದ್ದರೂ ಕೂಡಾ ಬ್ಯಾಂಕ ನಿಯಮಾವಳಿ ಉಲ್ಲಂಘಿಸಿ 1 ನೇ ಆರೋಪಿಯಿಂದ ಎಸ್ ಬಿ ಐ ಲೈಪ ಇನ್ಸೂರೆನ್ಸ ಪಾಲಸಿ ಮಾಡಿಸಿಕೊಂಡು ಬ್ಯಾಂಕನಿಂದ ಇನಸೆಂಟಿವ್ ಹಣ ಪಡೆದುಕೊಂಡು ವಂಚನೆ ಮಾಡುವ ಉದ್ದೇಶದಿಂದ ದಿನಾಂಕ 05.09.2015 ರಂದು ರೂ 6,00,000/- ಗಳನ್ನು 1 ನೇ ಆರೋಪಿಯ ಎಸ್ ಬಿ ಖಾತೆ ನಂ 64178318718 ನೇದ್ದಕ್ಕೆ ಜಮಾ ಮಾಡಿ ನಂತರ ಸದರ ಹಣವನ್ನು ಧಾರವಾಡ ಕಾರ್ಪೋರೇಷನ ಬ್ಯಾಂಕನಲ್ಲಿರುವ ರೇವಣಕರ ಮೋಟರ್ಸ ಪ್ರೊಪರೈಟರ 3 ನೇ ಆರೋಪಿಯ ಚಾಲ್ತಿ ಖಾತೆ ನಂ 306201601150017 ನೇದ್ದಕ್ಕೆ ಆರ್ ಟಿ ಜಿ ಎಸ್ ಮುಖಾಂತರ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಾರ ಸಾಲದ ಹಣ ಮಂಜೂರು ಮಾಡಿಸಿಕೊಂಡು ಕಾರ ಖರೀದಿಸದೆ ಬ್ಯಾಂಕಿಗೆ ಹಣವನ್ನು ಮರಳಿಸದೆ ಮರುಪಾವತಿ ಮಾಡದೆ ಆರೋಪಿತರು ಮಿಲಾಪಿಯಾಗಿ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡು ಬ್ಯಾಂಕಿಗೆ ನಷ್ಟ ಪಡಿಸಿ ಮೋಸ ಹಾಗೂ ನಂಬಿಕೆದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರ ಮುಂದೆ ನಿಪಿ-18 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 05.05.2019 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಆ ಸಮಯದಲ್ಲಿ ಆರೋಪಿತರ ಮದ್ಯ ಆದ ಹಣಕಾಸಿನ ವ್ಯವಹಾರದ ಬಗ್ಗೆ ತಿಳಿಸಿದ್ದು ಆರೋಪಿತರು ಎಲ್ಲರೂ ಸೇರಿ ತಮ್ಮ ಸ್ವಂತ ಲಾಭಕ್ಕೆ ಬಳಸಿಕೊಳ್ಳುವ ಉದ್ದೇಶದಿಂದ ಬ್ಯಾಂಕಿನ ಹಣ ಪಡದುಕೊಂಡಿರುವುದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಸೇರಿಕೊಂಡು ಒಳಸಂಚು ರೂಪಿಸಿ 4 ನೇ ಆರೋಪಿ ಮಂಜೂರು ಮಾಡಿದ ಹಣವನ್ನು 1 ರಿಂದ 3 ನೇ ರೋಪಿತರು ಬ್ಯಾಂಕಿಗೆ ಮರುಪಾವತಿಸದೆ ಬ್ಯಾಂಕಿಗೆ ನಷ್ಟವುಂಟು ಪಡಿಸಿ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಿಪಿ-19 ರಂತೆ ತನಿಖಾಧಿಕಾರಿ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ನಮ್ಮ ಹಿಂದಿನ ಬ್ಯಾಂಕಿನ ವ್ಯವಸ್ಥಾಪಕರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎ ಟಿ ಓ ವಕೀಲರಿಂದಃ**

ನಾನು ಹಿರಿಯ ಅಧಿಕಾರಿಗಳು ಹೇಳಿದ್ದರಿಂದ ಪೋಲೀಸ ಠಾಣೆಗೆ ಹೋಗಿ ಹೇಳಿಕೆ ನೀಡಿದ್ದೇನೆ ಎಂದರೆ ಸಾಕ್ಷಿ ನಾನು ಠಾಣೆಗೆ ಹೋಗಿಲ್ಲ ಎನ್ನುತ್ತಾರೆ. ಘಟನೆ ನಾನು ಶಾಖೆಗೆ ಬರುವ ಮುಂಚೆ ಆಗಿದ್ದು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್ ಎಸ್ ಯು ವಕೀಲರಿಂದಃ**

ಪೋಲೀಸರು ಪಡೆದುಕೊಂಡ ಹೇಳಿಕೆಯಲ್ಲಿ ಬರೆದ ವಿಷಯವನ್ನು ನನಗೆ ಹೇಳಿಲ್ಲ. ದಾಖಲೆಗಳನ್ನು ಪರಿಶೀಲನೆ ಮಾಡುವ ಅವಕಾಶ ನನಗೆ ಇರುವುದಿಲ್ಲ. ಘಟನೆ ನಡೆದ ಸಮಯದಲ್ಲಿ ನಾನು ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿರಲಿಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**